ಓ.ಎಸ್.ನಂ.116/2021

ಪಿ ಡಬ್ಲ್ಯೂಃ 2

ದಿನಾಂಕ 05 –01–2024 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಕೆ ಎನ್ ಡಿ ವಕೀಲರಿಂದಃ**

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ಓದಲು ಬರೆಯಲು ಬರುವುದಿಲ್ಲ. ಸಹಿ ಮಾಡುತ್ತೇನೆ. ನನ್ನ ಮುಖ್ಯ ವಿಚಾರಣೆಯ ಅಂಶಗಳು ನನಗೆ ತಿಳಿದಿದೆ. ಈ ದಾವೆಯ ಬಗ್ಗೆ ಮಾಹಿತಿ ಇರುತ್ತದೆ. ನನ್ನ ಜಮೀನು ವಾದಿಯರ ಜಮೀನಿಗೆ ಹೊಂದಿಕೊಂಡಂತೆ ಇರುತ್ತದೆ. ಪ್ರತಿವಾದಿಯರ ಜಮೀನು 10–15 ಅಡಿಗಳ ಅಂತರದಲ್ಲಿ ಇರುತ್ತದೆ. ನನ್ನ ಜಮೀನು ಸರ್ವೆ ನಂ. 758/3 ಆಗಿದ್ದು, ವಿಸ್ತೀರ್ಣ 3 ಎಕರೆ 10 ಗುಂಟೆ ಇರುತ್ತದೆ. ವಾದಿಯರ ಜಮೀನು ಸರ್ವೆ ನಂ. 757/4 ಆಗಿದ್ದು, ವಿಸ್ತೀರ್ಣ 10 ಎಕರೆ 26 ಗುಂಟೆ ಇರುತ್ತದೆ. ವಾದಿಯರ ಜಮೀನು ಪಶ್ಚಿಮಕ್ಕೆ ನನ್ನ ಜಮೀನು ಇರುತ್ತದೆ. ಸದರಿ ಜಮೀನನ್ನು ವಾದಿಯರು ಯಾವಾಗ ಖರೀದಿಸಿರುತ್ತಾರೆ ಎಂದು ನನಗೆ ತಿಳಿದಿಲ್ಲ. ವಾದಿಯರು ತಮ್ಮ ನಡುವೆ ಹಿಸ್ಸೆ ಮಾಡಿಕೊಂಡ ಬಗ್ಗೆ ನನಗೆ ತಿಳಿದಿಲ್ಲ. ಆದರೆ ತಲಾ 4 ಎಕರೆ ವಿಭಾಗಮಾಡಿಕೊಂಡಿದ್ದು ಅವರ ತಾಯಿಗೆ ಪಶ್ಚಿಮ ಭಾಗದ 2 ಎಕರೆ 26 ಗುಂಟೆ ಬಿಟ್ಟಿರುತ್ತಾರೆ ಎಂದು ತಿಳಿದುಕೊಂಡಿರುತ್ತೇನೆ. ಉಳಿದವರಿಗೆ ಯಾವ ಭಾಗದ ಜಮೀನು ಬಂದಿರುತ್ತದೆ ಎಂದು ನನಗೆ ತಿಳಿದಿಲ್ಲ.

2. ಖಾಸಗಿ ಸರ್ವೆ ಮಾಡಿಸಿದ ದಿನಾಂಕ ನನಗೆ ತಿಳಿದಿಲ್ಲ. ಸುಮಾರು 5 ವರ್ಷಗಳ ಹಿಂದೆ ಸರ್ವೆ ಮಾಡಿಸಿರುತ್ತಾರೆ. ಪ್ರತಿವಾದಿಗಳು ವಾದಿಯರಿಗೆ ತೊಂದರೆ ಮಾಡಿದರು ಎನ್ನಲಾದ ದಿನಾಂಕ ನನಗೆ ನೆನಪಿಲ್ಲ. ಸರ್ವೆ ನಂಬರ 757 ರ ಮೂಲತಃ ವಿಸ್ತೀರ್ಣ ಹಾಗೂ ಒಟ್ಟು ಎಷ್ಟು ಹಿಸ್ಸೆ ಆಗಿದೆ ಎಂದು ನನಗೆ ತಿಳಿದಿಲ್ಲ. ದಾವಾ ಸ್ವತ್ತನ್ನು ತಾಲೂಕು ಭೂಮಾಪಕರು ಯಾವಾಗ ಸರ್ವೆ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸರ್ವೆ ಮಾಡುವ ಮುನ್ನ ಅಕ್ಕಪಕ್ಕದ ಜಮೀನುದಾರರಿಗೆ ನೋಟಿಸ್ ನೀಡಲಾಗುತ್ತದೆ ಎಂದರೆ ಸರಿ. ಆ ಕಾಲಕ್ಕೆ ನನಗೆ ಭೂಮಾಪಕರು ಯಾವುದೇ ನೋಟಿಸ್ ನೀಡಿರುವುದಿಲ್ಲ. ವಾದಿ ಮತ್ತು ಪ್ರತಿವಾದಿಗಳ ಜಮೀನುಗಳ ನಡುವೆ ಒಂದು ಒಡ್ಡು ಇದೆ ಎಂದರೆ ಸರಿ . ಒಡ್ಡಿನಿಂದ ಆ ಕಡೆಗೆ ವಾದಿಯರು ಹಾಗೂ ಈ ಕಡೆಗೆ ಪ್ರತಿವಾದಿಯರು ವಹಿವಾಟು ಮಾಡುತ್ತಾರೆ ಎಂದರೆ ಸರಿ . ವಾದಿಯರು ಬಹಳ ವರ್ಷದಿಂದ

ಪರಿಚಯ ಇದ್ದು ಅನ್ಯೋನ್ಯವಾಗಿರುತ್ತೇವೆ. ಆದ್ದರಿಂದ ವಾದಿಯರಿಗೆ ಅನುಕೂಲ ಆಗಲೆಂದು ಪ್ರತಿವಾದಿಯರು ಅತಿಕ್ರಮ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರ ಜಮೀನಿಗೆ ಹೊಂದಿಕೊಂಡಂತೆ ನನಗೆ ಸೇರಿದ ಯಾವುದೇ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು.

ನನ್ನ ಸಮಕ್ಷಮ
ಸಹಿ/-

ಓ ಹೇ ಕೆ ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.